ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. **637/2022**

ಸಿ ಡಬ್ಲ್ಯೂ-1

ಪಿ ಡಬ್ಲ್ಯೂ- 1

ದಿಃ 19-10-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಮಂಜುನಾಥ ನಾಯಕ |
| ತಂದೆಯ ಹೆಸರುಃ | ಶಂಕರ |
| ವಯಸ್ಸುಃ | **41** ವರ್ಷ |
| ಉದ್ಯೋಗಃ | ಕಂದಾಯ ನಿರೀಕ್ಷಕರು, ಬಾಸ್ಗೂಡ |
| ವಿಳಾಸಃ | ಅಂಕೋಲಾ |

<u>ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ಯವರಿಂದಃ</u>

ಬಾಸ್ಗೂಡದಲ್ಲಿ ದಿಃ17-09-2020 ರಿಂದ ಇಲ್ಲಿಯವರೆಗೂ ಕಂದಾಯ ನಿರೀಕ್ಷಕನಾಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ. ಚಾಸಾ-4 ರವರ ಪರಿಚಯವಿದ್ದು, ಅವರು ಆಹಾರ ನಿರೀಕ್ಷರಾಗಿದ್ದಾರೆ. ದಿಃ28-05-2021 ರಂದು ಬೆಳಿಗ್ಗೆ 6.45 ಗಂಟೆಗೆ ಮಂಜುಗುಣಿ ಗ್ರಾಮದಲ್ಲಿ ಪಡಿತರ ಅಕ್ಕಿಯನ್ನು ಸಾಗಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿದ್ದು, ನಾನು ಮತ್ತು ಚಾಸಾ-4 ರವರು ಕೆಳಗಿನ ಮಂಜುಗುಣಿಗೆ ಹೋಗಿ ನೋಡಿದಾಗ ಅಲ್ಲಿ ಒಂದು ಟಾಟ ಎಸ್ ಗಾಡಿಯಲ್ಲಿ ಅಕ್ಕಿಯನ್ನು ತುಂಬಿಕೊಂಡು ಹೋಗುತ್ತಿರುವಾಗ ನಾವು ನಿಲ್ಲಿಸಿದ್ದು, ಚಾಲಕನು ಬಾಗಿಲನ್ನು ತೆಗೆದು ಓಡಿ ಹೋಗಿರುತ್ತಾನೆ. ಅದನ್ನು ನಾವು ನೋಡಿರುತ್ತೇವೆ.

2. ನಾನು ಮತ್ತು ಚಾಸಾ-4 ರವರು ವಾಹನವನ್ನು ಪರಿಶೀಲನೆ ಮಾಡಿದಾಗ ಚಾಸಾ-4 ರವರು ಪಡಿತರ ಅಕ್ಕಿ ಎಂದು ದೃಢೀಕರಿಸಿರುತ್ತಾರೆ. ಸುಮಾರು 29 ಚೀಲ ಅಕ್ಕಿ ಇದ್ದವು. ಪೊಲೀಸ್ ಠಾಣೆಯಲ್ಲಿ ಲೆಕ್ಕ ಮಾಡಿದಾಗ ಸುಮಾರು 9 ಕ್ವಿಂಟಾಲ್ 83 ಕಿ.ಲೋ ಇರುತ್ತವೆ. ನಾವು ಪರಿಶೀಲನೆ ಮಾಡಿದ ವಾಹನದ ಸಂಖ್ಯೆ ಕೆ ಎ 30 ಎ 0066 ಆಗಿರುತ್ತದೆ. ನಾವು ವಾಹನ ಮತ್ತು ಅದರಲ್ಲಿದ್ದ ಅಕ್ಕಿ ಚೀಲಗಳನ್ನು ವಶಕ್ಕೆ ಪಡೆದುಕೊಂಡಿರುತ್ತೇವೆ. ನಂತರ ಬೆಳಿಗ್ಗೆ 7.30 ರಿಂದ 8.45 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಲಾಯಿತು. ಪಂಚನಾಮೆಯ ಮೇಲಿರುವ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-1 ಅದರ ಮೇಲಿರುವ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ನಂತರ ದಿಃ29-05-2021 ರಂದು ದೂರನ್ನು ಕೊಟ್ಟಿರುತ್ತೇನೆ.

(ಈ ಹಂತದಲ್ಲಿ ದೂರಿನ ಮೂಲ ಪ್ರತಿಯು ಕಡತದಲ್ಲಿ ಇಲ್ಲದೇ ಇರುವುದು ಕಂಡುಬಂದಿದ್ದರಿಂದ ವಿಚಾರಣೆಯನ್ನು ಮುಂದುಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.